ಬಾಳಿಕೆ ಬರುತ್ತಿತ್ತೆನ್ನಿ. ಆದರೂ ಒಬ್ಬರ ಬಟ್ಟೆ ಎಳೆಯಲು ಹೋದರೆ ನಾಲ್ಕು ಜನರ ಬಟ್ಟೆಗಳು ಧರಾಶಾಯಿಯಾಗುತ್ತಿದ್ದವು. ದೊಡ್ಡವರು ಗಳದ ಮೇಲೆ ಎತ್ತಿ ಹಾಕಿದರೆ, ಮಕ್ಕಳು ಬಾಸ್ಕೆಟ್ ಬಾಲ್ ಆಟದಲ್ಲಿ ಚೆಂಡನ್ನು ಬಾಸ್ಕೆಟ್‌ಗೆ ಗುರಿ ಮಾಡಿ ಎಸೆಯುವಂತೆ ಜಿಗಿಯುತ್ತಾ, ಗಳದ ಮೇಲೆ ಎಸೆಯಲು ಪ್ರಯತ್ನಿಸಿ, ಕೆಲವೊಮ್ಮೆ ಸೋತು ಹಾಗೆಯೇ ಬಿಟ್ಟು ಓಡುತ್ತಿದ್ದವು.

ಮತ್ತೊಂದು ಖಾಲಿಗೋಡೆಗೆ ಹೆಚ್ಚೂಕಡಿಮೆ ತಾರಸಿಗಿಂತ ಎರಡಡಿ ಕೆಳಗೆ ಶೆಲ್ಫ್ ಕೂಡಾ ಇತ್ತು. ಎರಡು ಗಟ್ಟಿಮುಟ್ಟಾದ ಎರಡಡಿ ಉದ್ದದ ಆಂಗ್ಲ ಅಕ್ಷರದ 'ಎಲ್' ಶೈಲಿಯ ಕಬ್ಬಿಣದ ರಾಡ್‌ಗಳನ್ನು ಗೋಡೆಯ ಎರಡು ಬದಿಗೆ ಬಡಿದು, ಅದರ ಮೇಲೆ ಒಂದಡಿ ಅಗಲದ ಉದ್ದನೆಯ ಹಲಗೆಯನ್ನು ಅಡ್ಡ ಮಲಗಿಸಿದರೆ ಅದೇ ಶೆಲ್ಫ್. ಅದರ ಮೇಲೆ ಹಪ್ಪಳ, ಸಂಡಿಗೆ, ಮಜ್ಜಿಗೆಕಾಯಿ, ಉಪ್ಪಿನಕಾಯಿ, ಶಾವಿಗೆ, ಹಳೆಯ ಪುಸ್ತಕಗಳು ಎಲ್ಲವೂ ಡಬ್ಬಿ, ರಟ್ಟಿನಪೆಟ್ಟಿಗೆ ಹಾಗೂ ಭರಣಿಗಳಲ್ಲಿ ಠೀವಿಯಿಂದ ಪವಡಿಸಿರುತ್ತಿದ್ದವು. ಅವು ಕೇವಲ ರಾಜಾತಿಥ್ಯಕ್ಕೆ ಮೀಸಲಿದ್ದಂತೆ. ಹಬ್ಬಕ್ಕೋ, ಅತಿಥಿಗಳು ಬಂದಾಗಲೋ, ಆ ಶೆಲ್ಫಿಗೆ ಬಿದಿರಿನ ಏಣಿಯನ್ನು ಗೋಡೆಗಾನಿಸಿಟ್ಟು ಇಳಿಸಬೇಕಾಗಿತ್ತು. ಹಾಗಾಗಿ ಅಲ್ಲಿನ ಸುಣ್ಣದ ಗೋಡೆಯು, ಏಣಿ ಹತ್ತುವಾಗಿನ ತುದಿ ಒತ್ತುವಿಕೆಗೆ, ಆಳ ಗಾಯವಾದಾಗ ಒಳಚರ್ಮ ಕಾಣುವಂತೆ, ಅಲ್ಲಲ್ಲಿ ಸುಣ್ಣದ ಪದರ ಕಿತ್ತುಕೊಂಡು ಹೋಗಿ, ಗಾರೆ ಸ್ವಲ್ಪ ಕಾಣಿಸುತ್ತಿದ್ದುದಂತೂ ದಿಟ.

ಬಟ್ಟೆಗಳು ನೇತುಹಾಕಿದ್ದ ಗಳದ ಹಿಂದಿನ ಗೋಡೆಯಲ್ಲಿ ಸಣ್ಣ ಬೀರುವೂ ಇತ್ತು. ಅದಕ್ಕೆ ಸದಾ ಮುಚ್ಚಿಕೊಂಡಿರುತ್ತಿದ್ದ, ಗಾಢ ಹಸಿರು ಬಣ್ಣ ಬಳಿದ ಕಟ್ಟಿಗೆಯ ಬಾಗಿಲುಗಳು. ಆಗೆಲ್ಲ ಗೋಡೆಗಳಿಗೆ ಈಗಿನ ಕಾಲದ ಹಾಗೆ ವಾಸ್ತು ಲೆಕ್ಕಾಚಾರ ಹಾಕಿ ಗೋಡೆಗೊಂದೊಂದು ಬಣ್ಣ ಬಳಿಯುತ್ತಿರಲಿಲ್ಲ. ಇಡೀ ಮನೆಯ ಒಳಹೊರಗೆ ಸುಣ್ಣ, ಬಾರ್ಡರ್‌ಗೆ ಗೋಪಿಬಣ್ಣ ಬಿಟ್ಟರೆ ಬೇರೆ ಬಣ್ಣಗಳನ್ನು ಕಾಣುತ್ತಿದ್ದುದು ಅಪರೂಪ. ಆದರೆ ಇಡೀ ಮನೆಯ ಬಾಗಿಲು, ಬೀರೂವಿನ ಬಾಗಿಲು ಮತ್ತು ಕಿಟಕಿಗಳಿಗೆ ಮಾತ್ರ ಹಸಿರು, ನೀಲಿ – ಹೀಗೆ ಎಲ್ಲದಕ್ಕೂ ಗಾಢ ಬಣ್ಣಗಳನ್ನೇ ಹೊಡೆಸುತ್ತಿದ್ದುದರಿಂದ, ಬಿಳಿ ಶರ್ಟಿನಂತಹ ಗೋಡೆಗೆ, ಕಿಟಕಿ ಬೀರೂಗಳು, ಬಣ್ಣದ ನಿಕ್ಕರ್ ಅಥವಾ ಸ್ಕರ್ಟು ತೊಟ್ಟು ಶಾಲೆಯ ಸಮವಸ್ತ್ರವನ್ನು ನೆನಪಿಸುವಂತಿದ್ದವು.

ಆ ಬೀರು ಅಜ್ಜಿಯ ತಿಜೋರಿ. ಅದರಲ್ಲಿ ತುಪ್ಪ, ಜೇನುತುಪ್ಪ, ದ್ರಾಕ್ಷಿ, ಗೋಡಂಬಿ, ಉತ್ತತ್ತಿ, ಅಡಕೆ, ಒಣಕೊಬರಿಯಂತಹ ವಸ್ತುಗಳನ್ನೆಲ್ಲ ಬಂಗಾರಕ್ಕಿಂತ ಹೆಚ್ಚು ಜೋಪಾನವಾಗಿಟ್ಟು ಪುಟ್ಟ ಬೀಗ ಜಡಿಯುತ್ತಿತ್ತು. ಅದನ್ನೆಲ್ಲ ಯಾವ ಅಡುಗೆಗೆ ಹಾಕುತ್ತಿತ್ತೋ, ಯಾವಾಗ ತಿಂದಿದ್ದೇವೋ ನೆನಪೇ ಇಲ್ಲ. ಮನೆಯಲ್ಲಿ ಮದುವೆ, ನಾಮಕರಣ, ಸತ್ಯನಾರಾಯಣಪೂಜೆ ಹೀಗೆ ಏನಾದರೂ ಕಾರ್ಯಕ್ರಮಗಳು ನಡೆದಾಗ, ಅಡುಗೆ ಭಟ್ಟರ ಲಿಸ್ಟಿನಲ್ಲಿ ಕೇಜಿಗಟ್ಟಲೆ ದ್ರಾಕ್ಷಿ ಗೋಡಂಬಿಗಳನ್ನು ಬರೆದಿರುತ್ತಿದ್ದುದೇನೋ ನಿಜ. ಆದರೆ ಅವು ಅಂಗಡಿಯಿಂದ ಮನೆಗೆ ಬರುತ್ತಿದ್ದಂತೆ ಅರ್ಧಕ್ಕರ್ಧ ಅಜ್ಜಿ ಎತ್ತಿ ಬೀರೂವಿನಲ್ಲಿ ಭದ್ರವಾಗಿಡುತ್ತಿತ್ತು. ಒಟ್ಟಿನಲ್ಲಿ ತಿಜೋರಿ ಮಾತ್ರ ಸದಾ ಹೌಸ್‌ಫುಲ್ ಆಗಿರುತ್ತಿತ್ತು. ಚಕ್ಕುಲಿ, ರವೆಉಂಡೆ, ಕರ್ಜಿಕಾಯಿಗಳೂ ಅದರೊಳಗೇ. ಅವೆಲ್ಲಾ ನಂತರ ಊರಿನಲ್ಲಿರುವ ಮದುವೆಯಾದ ಸೋದರತ್ತೆಯರ ಮನೆಗೆ, ಅಜ್ಜಿಯ ತವರಿನವರಿಗೆ ರವಾನೆಯಾಗುತ್ತವೆ ಎಂದು ಅಮ್ಮ, ತನ್ನ ಮಕ್ಕಳಿಗೆ ಅವುಗಳನ್ನು ತಿನ್ನುವ ಭಾಗ್ಯವಿಲ್ಲವಲ್ಲ ಎಂದು ನೊಂದುಕೊಂಡು, ರಾತ್ರಿ ಮಲಗಿದಾಗ ಅಪ್ಪನಿಗೆ ಹೇಳುತ್ತ ಕಣ್ಣೀರು ಹಾಕುತ್ತಿದ್ದ ನೆನಪು.

ದೇವರಕೋಣೆಯ ಬಾಗಿಲು ಹಾಗೂ ಚಿಲಕ ಸಹ ಸರಿಯಾಗಿ ಕೂಡುತ್ತಿರಲಿಲ್ಲ. ಹಾಕಲೇಬೇಕೆಂದಿದ್ದರೆ ಇಡೀ ಮೈಯೊಳಗಿನ ಶಕ್ತಿಯನ್ನು ಕ್ರೋಢೀಕರಿಸಿ ಎರಡೂ ಬಾಗಿಲನ್ನು ಜೋರಾಗಿ ಗುದ್ದಿ ಜಡಿಯಬೇಕಿತ್ತು. ತಡರಾತ್ರಿ ಅಮ್ಮನ ಕೆಲಸವೆಲ್ಲ ಮುಗಿದು ಮಲಗಲು ಕೋಣೆಗೆ ಬರುವಷ್ಟರಲ್ಲಿ ಆಯಾಸದಿಂದ ಬಸವಳಿದಿರುತ್ತಿದ್ದಳು. ಆ ಸಮಯದಲ್ಲಿ ಎರಡು ಶಿಫ್ಟ್ ಕೆಲಸ ಮಾಡಿ ಬಂದಿರುತ್ತಿದ್ದ ಅಪ್ಪ ಹಾಗೂ ನಾವು ಮಕ್ಕಳೆಲ್ಲ ನಿದ್ರಾದೇವಿಯ ವಶವಾಗಿರುತ್ತಿದ್ದೆವು. ಹಾಗಾಗಿ ಇತ್ತ ಜೋರಾಗಿ ಗುದ್ದಲೂ ಆಗದೆ, ಅದು ಮಾಡುವ ಶಬ್ದಕ್ಕೆ ಮನೆಮಂದಿಗೆಲ್ಲ ಎಚ್ಚರವಾಗಿ ಮುಜುಗರಪಡುವಂತಾಗುವುದು ಬೇಡ ಎಂದು, ತನಗೆ ಸಾಧ್ಯವಾದಷ್ಟು ಗಟ್ಟಿಯಾಗಿ ಗದುಮಿ, ಬೀಳದ ಬೋಲ್ಟ್ ಅನ್ನು ಹಾಕಲು ಸೋತು, ಸ್ವಲ್ಪವೇ ಸರಿಸಿ ಮಲಗುತ್ತಿದ್ದಳು. ಬೆಳ್ಬೆಳಗ್ಗೆ ಐದು ಐದೂವರೆಗೆಲ್ಲ ಅಮ್ಮ ಅಕಸ್ಮಾತ್ ಎದ್ದಿರದಿದ್ದರೆ, ಅಜ್ಜಿ ಬಚ್ಚಲಿಗೆ ಹೋಗುವ ಮುನ್ನ 'ಇನ್ನೂ ಎದ್ದಿಲ್ಲೇನವ್ವಾ' ಎನ್ನುತ್ತಾ, ಬಾಗಿಲನ್ನು ಎರಡೂ ಕೈಯಿಂದ ಅಥವಾ ಕಾಲಿನಿಂದ ದಢಾರನೆ ದೂಡುವುದಿತ್ತು. ನಿದ್ದೆಗಣ್ಣಿನಲ್ಲಿ ಪುಟ್ಟ ತಮ್ಮನಿಗೆ ಮೊಲೆಯೂಡಿಸುತ್ತಲೋ ಅಥವಾ ಅಪ್ಪನ ತೋಳಿನ ಮೇಲೆ ಗಾಢನಿದ್ರೆಯಲ್ಲಿಯೋ ಇರುತ್ತಿದ್ದ ಅಮ್ಮ ಗಡಬಡಿಸಿ ಎದ್ದು ಬಟ್ಟೆ ಸರಿಪಡಿಸಿಕೊಂಡು, ಅವಮಾನಭರಿತ ನಾಚಿಕೆಯಿಂದ ಸೆರಗೊದ್ದುಕೊಂಡು, ಅಜ್ಜಿಯ ವರ್ತನೆಗೆ ಕೋಪ ಬಂದರೂ ಆಡಲಾರದೆ ಅವುಡುಗಚ್ಚಿ ಏಳುತ್ತಿದ್ದಳು. ಬಹುಶಃ ಇದೇ ಕಾರಣಕ್ಕೆ, ಸೊಳ್ಳೆಗಳು ಇರಲಿ ಬಿಡಲಿ, ಇಡೀ ದೇವರಕೋಣೆ ಮುಚ್ಚುವಷ್ಟು ದೊಡ್ಡ ಸೊಳ್ಳೆಪರದೆಯನ್ನು ಮರೆಯದೆ ಕಟ್ಟುತ್ತಿದ್ದಳು ಎನಿಸುತ್ತದೆ. ಅಳುತ್ತಿದ್ದ ತಮ್ಮನನ್ನು ಪಕ್ಕದಲ್ಲಿದ್ದ ಜೋಲಿಗೆ ಹಾಕಿ, ಅದನ್ನು ದರದರ ಹೊರಗೆ ನಡುಮನೆಗೆ ಎಳೆದುಕೊಂಡು ಹೋಗಿ ಅಜ್ಜನ ಮುಂದೆ ಇಟ್ಟು ಮನೆಗೆಲಸಕ್ಕೆ ಅಣಿಯಾಗುತ್ತಿದ್ದಳು. ಹಗಲಿನಲ್ಲಿ ಈ ಕೂಸು ಮಲಗಿದ ಜೋಲಿ, ಸ್ವಲ್ಪ ಕೈಬಿಡುವಿರುವವರು ಅವರೆಕಾಯಿ, ಚವಳಿಕಾಯಿ ಬಿಡಿಸುತ್ತಲೋ, ಪುಸ್ತಕ ಓದುತ್ತಲೋ, ತಾವು ಕುಳಿತಿದ್ದ ಕಡೆ ಎಳೆದುಕೊಂಡು ಹೋಗಿ ತೂಗುತ್ತಾ ಕುಳಿತುಕೊಳ್ಳುತ್ತಿದ್ದರಿಂದ ಮನೆ ತುಂಬ ಓಡಾಡುತ್ತಿತ್ತು. ಮಕ್ಕಳು ಸ್ವಲ್ಪ ದೊಡ್ಡವಾದ ಮೇಲೂ ಹಗಲಿನಲ್ಲಿ ಜೋಲಿಯ ಕಾಯಂ ಸ್ಥಾನ ದೇವರಕೋಣೆಯೇ. ಅದರ ಮೇಲೆಯೂ ಲುಂಗಿ, ಸ್ನಾನದ ನಂತರ ಒರೆಸಿಕೊಂಡ ಹಸಿಟವೆಲ್ಲು, ಎರಡೂ ಕಡೆ ಮೇಲಿನ ಚೂಪನೆಯ ಗೂಟಕ್ಕೆ, ಶಾಲೆಗೆ ಹೋಗುವ ಹೆಣ್ಣುಮಕ್ಕಳ ರಿಬ್ಬನ್ನು, ಪಾಟೀಚೀಲ ಎಲ್ಲ ತೂಗಾಡುತ್ತಿದ್ದವು. ರಾತ್ರಿಯ ಹೊತ್ತು ಅದನ್ನು ಹಾಲ್‌ಗೆ ವರ್ಗಾಯಿಸಿ ಹಾಸಿಗೆ ಹಾಸುತ್ತಿದ್ದಳು ಅಮ್ಮ. ದೇವರ ಕೋಣೆಯಲ್ಲಿ ಸದಾ ಸ್ವಲ್ಪ ಮಬ್ಬುಗತ್ತಲಿರುತ್ತಿದ್ದುದರಿಂದ ಕಣ್ಣುಮುಚ್ಚಾಲೆಯಾಡುವಾಗ, ಮಕ್ಕಳು ಅದರ ಒಂದು ಮೂಲೆಯಲ್ಲಿ ಹೋಗಿ ಅಡಗಿಕೊಳ್ಳುವುದಕ್ಕೆ ಪ್ರಶಸ್ತ ಸ್ಥಳವಾಗಿತ್ತು.

ಆ ದೇವರಕೋಣೆಯ ಎದುರಿಗಿದ್ದ ಸ್ವಲ್ಪ ಸ್ಥಳವನ್ನು ಕೊಟ್ಟಿಗೆಯನ್ನಾಗಿ ಪರಿವರ್ತಿಸಿದ್ದರು. ಮೂಲೆಯಿರುವ ಗೋಡೆಯಿಂದ, ಅದರ ಅಕ್ಕಪಕ್ಕದ ಗೋಡೆಗಳಿಗೆ ಅಡ್ಡ ತೊಲೆ ಹೊಡೆದು, ನಾಲ್ಕನೆಯ ಮೂಲೆಗೆ ಒಂದು ಕಟ್ಟಿಗೆಯ ಕಂಬ ಆಸರೆಕೊಟ್ಟು ಅಟ್ಟ ಮಾಡಿ, ಅದರ ಮೇಲೆ ಹಸುವಿಗೆ ಬೇಕಾದ ಮೇವು, ಒಲೆ ಉರಿಸುವ ಕಟ್ಟಿಗೆ ಇಡಲು ಅನುಕೂಲ ಮಾಡಿ, ಕೆಳಭಾಗದ ಮೂಲೆಯಲ್ಲಿ ನೆಲಕ್ಕೆ ಗೂಟಹೊಡೆದು ಹಸು ಮತ್ತು ಕರುವನ್ನು ಕಟ್ಟಿರುತ್ತಿದ್ದರು. ಸ್ವಲ್ಪ ಆರಾಮವಾಗಿ ಅಡ್ಡಾಡಲಿ ಎಂದು ಗೂಟಕ್ಕೆ ಉದ್ದನೆಯ ಹಗ್ಗವನ್ನು ಕಟ್ಟಿರುತ್ತಿದ್ದುದರಿಂದ, ಅವುಗಳು ರಾತ್ರಿಯ ಹೊತ್ತು ಹೆಚ್ಚು ಕಡಿಮೆ ದೇವರ ಕೋಣೆಯ ಬಾಗಿಲಿಗೇ ಮಲಗಿರುತ್ತಿದ್ದವು. ಅಲ್ಲೇ ಸೆಗಣಿ, ಗಂಜಲ ಹಾಕಿರುತ್ತಿದ್ದವು. ಕರುವಂತೂ ಓಡಾಡುವವರ ಕಾಲುಕಾಲಿಗೇ ಅಡ್ಡಡ್ಡ ತೊಡರುತ್ತಿತ್ತು. ಬೆಳಗ್ಗೆ ಎದ್ದು ಹೊರಬರುವಾಗ ಕಣ್ಣು ನಿಚ್ಚಳವಾಗಿ ಬಿಟ್ಟುಕೊಂಡೇ ಹೊಸ್ತಿಲ ಹೊರಗೆ ಕಾಲಿಡಬೇಕಿತ್ತು. ಎಷ್ಟೋ ಸಲ ಸೆಗಣಿಯ ಮೇಲೆ ಕಾಲಿಟ್ಟು ಜಾರಿದ್ದೂ ಇತ್ತು. ರಾತ್ರಿಯ ಹೊತ್ತು ಹಸು 'ಅಂಬಾ' ಎಂದು ಕೂಗುವುದು, ಓಡಾಡುವ, ಮೆಲುಕು ಹಾಕುವ ಶಬ್ದಕ್ಕೆ ನಿದ್ದೆಯಿಂದ ಎಚ್ಚರವಾಗುವುದೂ ಇತ್ತು. ಹಸುವಿನ ಹಾಲು ಕರೆಯುವ ಕೆಲಸ ಅಜ್ಜಿಯದೇ ಆಗಿದ್ದರಿಂದ, ಅದರ ನೊರೆ ಹಾಲನ್ನು ಕುಡಿಯಬೇಕೆಂಬ ಕನಸು ನನಸಾಗುತ್ತಿದ್ದುದು ಅಪ್ಪ ಮನೆಯಲ್ಲಿದ್ದಾಗ ಮಾತ್ರ. ದೇವರ ಕೋಣೆಗೆ ಇದ್ದ ಒಂದೇ ಒಂದು ಕಿಟಕಿ ಕೂಡಾ ಕೊಟ್ಟಿಗೆಯ ಕಡೆ ಮುಖಮಾಡಿಯೇ ತೆರೆಯುತ್ತಿದ್ದುದು. ಮನೆಯ ಹೊರಭಾಗಕ್ಕೆ ಮುಖ ಮಾಡಿರುವ ಕಿಟಕಿಗಳೇ ಇರಲಿಲ್ಲ. ಅಡುಗೆ ಮನೆಗೆ, ಬಚ್ಚಲಿಗೆ, ಸಂಡಾಸಿಗೆ, ಕೊಟ್ಟಿಗೆಗೆ, ಹೀಗೆ ಎಲ್ಲದಕ್ಕೂ ದೇವರ ಕೋಣೆಯ ಮುಂಭಾಗದಲ್ಲಿದ್ದ, ಮೂರು ಅಡಿಯ ಪ್ಯಾಸೇಜ್ ಮೂಲಕವೇ ಹಾಯಬೇಕಿತ್ತು. ಹಾಗೆ ಓಡಾಡುವಾಗ ಮೇಲಿನ ಎರಡು ಕಿಟಕಿಗಳು ತೆರೆದರೆ ಒಳಗಿರುವವರು ಅರ್ಧಭಾಗ, ಕೆಳಗಿನವುಗಳನ್ನೂ ತೆರೆದರೆ ಇಡೀ ಕೋಣೆಯ ಚಿತ್ರಣ, ಬೇಡವೆಂದರೂ ಕಣ್ಣಿಗೆ ಬೀಳುತ್ತಿತ್ತು. ಹಾಗಾಗಿ ಪ್ರತಿಯೊಂದು ಕೆಲಸ ಮಾಡುವಾಗಲೂ ಮುಚ್ಚಿಯೇ ಇಡಬೇಕಾದ ಪರಿಸ್ಥಿತಿ.

ಸೋದರತ್ತೆಯರನ್ನು ಗಂಡಿನ ಕಡೆಯವರು ನೋಡಲು ಬಂದಾಗ ರೆಡಿಯಾಗುತ್ತಿದ್ದುದು ಅಥವಾ ರೆಡಿ ಮಾಡುತ್ತಿದ್ದುದು ಇದೇ ದೇವರಕೋಣೆಯಲ್ಲಿ. ಮದುವೆಗೆ ಮುಂಚೆ ಗಂಡು ಹೆಣ್ಣು ಮಾತುಕತೆಯಾಡಲು ಇಚ್ಛಿಸಿದರೆ